ಓಹೊ ಹೋ... ಹೋ ಅತ್ತ ನುಗ್ಗಿತು ಹಿತ್ತಲಿಗೆ. ಇತ್ತ ನುಸಿಯಿತು ಕೊಟ್ಟಿಗೆಗೆ. ಸಣ್ಣ ಓಣಿಯಲಿ ಚಿಮ್ಮಿ ಓಡಿತು. ಅದರ ಎದುರು ಬಂದವರು ಕಕ್ಕಾಬಿಕ್ಕಿಯಾದರು. ಎಡವಿ ಬಿದ್ದರು, ಮುಗ್ಗರಿಸಿ ಎದ್ದರು. ಏಳಲಾರದವರು ನೆಲರಾವಿದರು. ಹಾ... ಹೋ... ಎಂದು ಕೋಲು ಬಡಿಗೆಗಳೊಂದಿಗೆ ಕೈಗೆ ಸಿಕ್ಕಿದುದ ಹಿಡಿದು ಹಿಂದೆ ಹಿಂದೆ ಓಡಿದರು.

ಟಾಕು ಟೀಕಿನ ಮಾಟ
ದಿಗರು ಪೊಗರಿನ ಮಾಟ
ಬಾಚಿ ಮುಟ್ಟದ ಮಾಟ
ಒಡಗಿ ಕೆತ್ತದ ಮಾಟ
ಗುಟರು ಗುಡುಗಿನ ಹೂಟ
ಹೇಳಲಾಗದ ಕಾಟ

ಯಾವ ಊರ ಕೋಣವೋ ಏನೋ!? ಬರೀ ಕೋಣವಲ್ಲ, ಮಾರಿಕೋಣ ಮಹಾಕೋಣ. ಊರವರು ಜನುಮದಲ್ಲೇ ಇಂತಾ ಕೋಣವನ್ನು ಕಂಡಿರಲಿಲ್ಲ. ಹತ್ತಾರು ದಿನಗಳಿಂದ ಈ ಊರ ಸುತ್ತಲೆ ಸುತ್ತುತ್ತಿದೆ. ಮೊರದಗಲ ಹಣೆ, ಮೊಟ್ಟೆಗಾತ್ರದ ಕಣ್ಣು, ರಟ್ಟೆಗಾತ್ರದ ಕೊಂಬು, ಆನೆ ಕಾಲಿನಂತಹ ತೊಡೆ, ಜಿಡ್ಡುಕಪ್ಪಿನ ಎಣ್ಣೆ ಒಸಿಯುವ ಮಿರುಗು ಮೈಯಿ ಅದಕ್ಕೆ. ನಾಲಕ್ಕೂ ಕಾಲುಗಳ ಮುಂಗಾಲ ಗೊರಸಿನ ಮೇಲೆ ಅರಳಿ ಎಲೆಯ ಮಾಟ.

ಭೀತಿಗೆ ಭೀತಿ ಹುಟ್ಟಿಸುವ, ಮದವೇರಿದ, ಮತ್ತಿನ ಕೆಂಜರುಗಣ್ಣುಗಳ ರವರವ ನೋಟ. ಪಳಗಿದ ಕುದುರೆಯ ಖುರಪುಟದ ಟಾಕುಟೀಕಿನ ಓಟ. ನಿಂತರೂ ಮಲಗಿದರೂ ಮಗ್ಗಲಾದರೂ ಗಾಂಭೀರ್ಯದ ಗತ್ತು. ಬುಸುಗುಟ್ಟಿದರೆ ಮೂಗಿನ ಹೊಳ್ಳೆಗಳು ಕಮ್ಮಾರರ ತಿದಿಗಿಂತಲೂ ಜೋರಿನ ಗಾಳಿ ತೂರಿ ಹಿಗ್ಗಿ ಕುಗ್ಗಿ ಉಸಿರಾಡುವವು.

ಎಮ್ಮೆ ಹಿಂಡಲಿ ನುಗ್ಗಿದರೆ ಕೆಲವನ್ನು ಹೊರತುಪಡಿಸಿ ಎಲ್ಲವೂ ಗರಬಡಿದು ಹಿಂದೆ ಸರಿವವು.

ಅಲ್ಲಿ ತಿರುಗಿ, ಇಲ್ಲಿ ಹೊರಳಿ, ಓಡುವ ಓಟದ ಬಿರುಸಲಿ ಮೈಯ ಉಜ್ಜಿ ತಾಗಿಸಿ, ಮನೆಯ ಮುಂದಿನ ನೆರಕೆ ಕೊಟ್ಟಿಗೆಯ ಗೂಟ ಲಟ ಲಟನೆ ಮುರಿದು, ಲೊಟ ಲೊಟ ಹೆಂಚು ಕುಸಿಯಿತು. ಓಡಿತು ಮುಂದೋಡಿತು; ಅದರ ಹಿಂದಿಂದೆಯೇ ಜನ. ಅವರು ಇವರು ಒಬ್ಬೊಬ್ಬರೆ ಸೇರಿಕೊಂಡರು. ಅವರ 'ಹೋ', 'ಹೋ' ಗದ್ದಲ ಕಾಕು ಕೇಕುಗಳಿಗೆ ಅದು ಜಗ್ಗಲಿಲ್ಲ. ಊರಿಗೆ ಊರೇ ನಡುಗುವಂತೆ ತಟ್ಟಕ್ಕನೆ ನಿಂತು ಹಿಂದೆ ತಿರುಗಿ ಗುಡು ಗುಡುಗಿದಂತೆ ಗುಟುರಿಸಿತು. ಹಿಂದೆ ಬಂದ ಎದೆಗಾರರೆಲ್ಲ ಬಡಿಗೆಗಳ ಅಡಿಸರಿಸಿ ಬೆದರಿ ಬಿದ್ದೋಡಿ ಅವಿಸಿಕೊಂಡರು.

ಹುಲ್ಲು ಹೇರಿನ ತುಂಬುಗಾಡಿ ಊರೊಳಗೆ ಬರುತಲಿತ್ತು. ಗಾಡಿಯ ಹೇರಿನ ಮೇಲೆ, ಎರಡಾಳು ಎತ್ತರದಲಿ ಕೂತವನೆ ಅಣ್ಣ. ಮೂಕಿ ತುದಿಯಲಿ ಕೂತು ಗಾಡಿ ಹೊಡೆಯುತಲವನೆ ತಮ್ಮ. ಚಿಗುರೆ ಮಾಟದ ಓಟದ, ಎರಡು ಹಲ್ಲಿನ ಎಳೆಕರುಗಳು ಎಂದೇ ಕರೆಯುವ ಎತ್ತುಗಳು ಗಾಡಿ ಎಳೆಯುತಿವೆ. ನಡು ಊರಲಿ ಬರುವಾಗ ಎದುರಿಗೆ ಬಲು ಬಿರುಸಲಿ ಪುಟು ಪುಟಿಸಿ ಬಂತು ಮಾರಿಕೋಣ. ಕೋಣ ತಾನೇ ಪಕ್ಕಕೆ ಸರಿಯಲಿಲ್ಲ; ಕಾಲು ಕೆದರಿ ಕೊಂಬು ಆಡಿಸಿ ತಲೆಕೊಡವಿತು. ಎತ್ತಿನಗಾಡಿಯ ಎತ್ತುಗಳು ರಸ್ತೆಯ ಎದುರಿಗೆ ಕೆಕ್ಕರಿಸಿ ನಿಂತ ಕೋಣನ ದುರು ದುರು ನೋಟವ ಕಂಡು ಬೆದರಿದವು. ಹಗ್ಗ ಎಷ್ಟು ಎಳೆದರೂ ಬಗ್ಗವು. ಜಗ್ಯಾಡಿ ಜಗ್ಯಾಡಿ ಪಕ್ಕದ ಬಾವಿ ಹಿಂದಿನ ಯಾರದೋ ಹಿತ್ತಲ ಕೊಪ್ಪಲತ್ತ ನುಗ್ಗಿ ಎಳೆದೋಡಿದವು. ತಗ್ಗು ದಿಬ್ಬವ ನೋಡದೆ ಎತ್ತೆತ್ತಲೋ ಓಡಿದ ಗಾಡಿಯ ಓಲಾಟದ ದಡಕಿಗೆ ಮೇಲೆ ಕೂತ ಅಣ್ಣ ಎತ್ತೊಗೆದಂತೆ ಕೆಳಬಿದ್ದ.

ಆಡುವ ಕಂದವೊಂದು ಅಂಗಿ ಅಗಿದು ಜಗಿದು ಸೀಪಿ ಸ್ವಾದ ಹೀರಿ ಆನಂದದಲಿ ಮೈಮರೆತು